2020 ಕ.ತೀ.ವ 496

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಜಾನ್ ಮೈಕೆಲ್ ಕುನ್ಹ

## ನಭಿರಾಜ್ –ವಿರುದ್ಧ– ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ*

ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಅಡಿಯಲ್ಲಿನ ಕ್ರಿಮಿನಲ್ ಅರ್ಜಿ.

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ (V ನ್ಯಾಯಾಲಯ), ಮಂಗಳೂರು ಇವರ ಕಡತದಲ್ಲಿ ಇತ್ಯರ್ಥದಲ್ಲಿರುವ ಸಿ.ಸಿ. ಸಂಖ್ಯೆ: 764/2014ರಲ್ಲಿ ದೂರನ್ನು ರದ್ದುಗೊಳಿಸಲು ಕೋರಿ ಈ ಅರ್ಜಿಯನ್ನು ಸಲ್ಲಿಸಲಾಗಿದೆ.

ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಕದ್ರಿ ರಸ್ತೆ, ಪಂಪ್‌ವೆಲ್, ಮಂಗಳೂರು ಇಲ್ಲಿಂದ ಪಡೆದ 2,50,00,000/- ರೂ.ಗಳ (ಎರಡು ಕೋಟಿ ಐವತ್ತು ಲಕ್ಷ ರೂಪಾಯಿಗಳ) ಮೊತ್ತಕ್ಕೆ ಇದರಲ್ಲಿನ ಅರ್ಜಿದಾರರು ನೀಡಿದ ಚೆಕ್‌ನ ನಿರಾಕರಣೆಗಾಗಿ, ವರ್ಗಾವಣೀಯ ಲಿಖಿತಗಳ ಅಧಿನಿಯಮ, 1881ರ 138ನೇ ಪ್ರಕರಣದ ಅಡಿಯಲ್ಲಿ ಕ್ರಮ ಕೋರಿ, ಪ್ರತ್ಯರ್ಜಿದಾರರು-ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಇವರು, ದಂಡ ಪ್ರಕ್ರಿಯಾ ಸಂಹಿತೆಯ 200ನೇ ಪ್ರಕರಣದ ಅಡಿಯಲ್ಲಿ ದೂರನ್ನು ಸಲ್ಲಿಸಿದ್ದಾರೆ. ದೂರಿಗನುಗುಣವಾಗಿ, ಎಜಡ್‌ಟಿಇಸಿ ಡಿಜಿಟಲ್ಸ್ ಪ್ರೈವೇಟ್ ಲಿಮಿಟೆಡ್ ಇವರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಎಸ್‌ಎಮ್‌ಇ ಶಾಖೆ ಇವರಿಂದ ಸಾಲವನ್ನು ಪಡೆದಿದ್ದಾರೆ. ಸಾಲದ ಮೊತ್ತದ ಭಾಗದ ತೀರಿಕೆಗೆಂದು, ನಿರ್ದೇಶಕರು, ಇದರಲ್ಲಿನ ಅರ್ಜಿದಾರರು/ ಆರೋಪಿಯು ಮೇಲೆ ಹೇಳಿದ ಚೆಕ್‌ಅನ್ನು ನೀಡಿದ್ದಾರೆ. ಚೆಕ್ ಟ್ರಂಕೇಷನ್ ವ್ಯವಸ್ಥೆ ಮೂಲಕ ಸದರಿ ಚೆಕ್‌ಅನ್ನು ಹಣ ಸಂಗ್ರಹಣೆಗಾಗಿ ಹಾಜರುಪಡಿಸಿದಾಗ, ಸಾಕಷ್ಟು ಹಣ ಇಲ್ಲವೆಂಬ ಕಾರಣದ ಮೇಲೆ ಅದನ್ನು ನಿರಾಕರಿಸಲಾಯಿತು. ಮಾನ್ಯ

*ಕ್ರಿಮಿನಲ್ ಅರ್ಜಿ ಸಂಖ್ಯೆ: 6816/2015, ದಿನಾಂಕ 29ನೇ ಆಗಸ್ಟ್, 2019.

ದಂಡಾಧಿಕಾರಿಗಳು, ಮೇಲಿನ ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಂಡು ಅರ್ಜಿದಾರರಿಗೆ ಸಮನುಗಳನ್ನು ನೀಡಿದ್ದಾರೆ.

ದೂರಿನಲ್ಲಿ ಮಾಡಿದ ವಾದಗಳು ನೀರಸ ಮತ್ತು ಅಸ್ಪಷ್ಟವಾಗಿವೆ ಎಂಬ ಕಾರಣದ ಮೇಲೆ ವ್ಯವಹರಣೆಗಳನ್ನು ರದ್ದುಗೊಳಿಸಲು ಕೋರಿ ಅರ್ಜಿದಾರರು ಈ ನ್ಯಾಯಾಲಯವನ್ನು ಸಂಪರ್ಕಿಸಿದ್ದಾರೆ. ಸಾಲ ಸೌಲಭ್ಯವನ್ನು ಕಂಪನಿಯು ಲಭ್ಯಗೊಳಿಸಿದೆಯೇ ಹೊರತು ಅರ್ಜಿದಾರರು/ ಆರೋಪಿಯು ಅಲ್ಲ; ಕಂಪನಿಯ ಪರವಾಗಿ ಅರ್ಜಿದಾರರು/ ಆರೋಪಿಯು ನೀಡಿದ್ದ ಪ್ರಶ್ನೆಯಲ್ಲಿರುವ ಚೆಕ್‌ಗೆ ಸಂಬಂಧಪಡುವಷ್ಟರಮಟ್ಟಿಗೆ ದೂರನ್ನು ಸಲ್ಲಿಸಲು, ದೂರುದಾರರು ಅಹವಾಲು ಹೇಳಿಕೊಳ್ಳುವ ಹಕ್ಕನ್ನು ಹೊಂದಿಲ್ಲ; ಕಂಪನಿಯು, ಸದರಿ ಚೆಕ್‌ನ "ಭಾವಿ ಧಾರಕ"ರಾಗಿದ್ದರಿಂದ, ಪ್ರಶ್ನೆಯಲ್ಲಿರುವ ಚೆಕ್‌ನ ಮೇಲೆ ದೂರುದಾರರು ಯಾವುದೇ ಹಕ್ಕನ್ನು ಹೊಂದಿರಲಿಲ್ಲ; ಅರ್ಜಿದಾರ/ಆರೋಪಿ ಮತ್ತು ಪ್ರತ್ಯರ್ಜಿದಾರ/ದೂರುದಾರ ಇವರ ನಡುವೆ ಯಾವುದೇ ವ್ಯವಹಾರವಾಗಿರಲಿಲ್ಲವಾದ್ದರಿಂದ, ಅರ್ಜಿದಾರರು ನೀಡಬಹುದಾಗಿದ್ದ ಚೆಕ್‌ನ ಸಂಬಂಧದಲ್ಲಿ ಯಾವುದೇ ಹೊಣೆಗಾರಿಕೆ ಇರಲಿಲ್ಲ; ಕಂಪನಿಯಿಂದ ಯಾವುದೇ ಹಿಂಬರಹ ಇಲ್ಲದಿರುವುದರಿಂದ, ಈ ಚೆಕ್‌ನ "ಸಂದಾಯದಾರ" ಅಥವಾ "ಭಾವಿ ಧಾರಕ"ನ ವಿವರಣೆಗೆ ದೂರುದಾರರಿಗೆ ಉತ್ತರಿಸಲಾಗಿರುವುದಿಲ್ಲ; ಹಾಗಾಗಿ, ಎನ್.ಐ. ಅಧಿನಿಯಮದ 238(ಬಿ) ಪ್ರಕರಣದ ಉಪಬಂಧಗಳ ದೃಷ್ಟಿಯಲ್ಲಿ ಮೇಲೆ ಹೇಳಿದ ಚೆಕ್‌ನ ಸಂದಾಯಕ್ಕೆ ಬೇಡಿಕೆ ಇಡುವ ಯಾವುದೇ ಹಕ್ಕನ್ನು ದೂರುದಾರರು ಹೊಂದಿರುವುದಿಲ್ಲ ಎಂಬುದು ಅವರ ನಿವೇದನೆಯಾಗಿದೆ.

ಪ್ರಶ್ನೆಯಲ್ಲಿರುವ ಚೆಕ್ ಕ್ರಾಸ್ ಆಗಿದ್ದು, ಅದು ವರ್ಗಾವಣೀಯವಲ್ಲ ಮತ್ತು ಅದು 'ಧಾರಕ ಚೆಕ್' ಅಲ್ಲವಾದ್ದರಿಂದ, ದೂರುದಾರರು ಎನ್.ಐ. ಅಧಿನಿಯಮದ 138ನೇ ಪ್ರಕರಣದ ಅಡಿಯಲ್ಲಿ ವ್ಯವಹರಣೆಗಳನ್ನು ಪ್ರಾರಂಭಿಸಲು ಹಕ್ಕುಳ್ಳವರಾಗಿರಲಿಲ್ಲ; ಆರೋಪಿತ ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳುವಲ್ಲಿ ಮತ್ತು ಅರ್ಜಿದಾರರಿಗೆ ಸಮನುಗಳನ್ನು ನೀಡುವಲ್ಲಿ ಮಾನ್ಯ ದಂಡಾಧಿಕಾರಿಗಳು ತಪ್ಪೆಸಗಿದ್ದಾರೆ ಎಂದು ಅರ್ಜಿದಾರರು ವಾದಿಸಿದ್ದಾರೆ.

ಈ ವಾದಕ್ಕೆ ಪ್ರತಿಯಾಗಿ ಪ್ರತ್ಯರ್ಜಿದಾರರು, ಚೆಕ್‌ನ ಅವಧಿಯ ಕಡೆಗೆ ಗಮನ ಸೆಳೆದು, ಚೆಕ್‌ನಲ್ಲಿರುವ “ಧಾರಕ” ಎಂಬ ಪದವನ್ನು ಹೊಡೆದುಹಾಕಿಲ್ಲವೆಂದು, ತತ್ಪರಿಣಾಮವಾಗಿ ಸದರಿ ಚೆಕ್, ಧಾರಕ ಚೆಕ್ ಆಗಿ ಉಳಿದಿದೆ; ಚೆಕ್‌ಅನ್ನು ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಕ್ರಾಸ್ ಮಾಡುವುದು ವರ್ಗಾವಣೀಯ ಲಿಖಿತದ ಮೇಲೆ ಪರಿಣಾಮ ಬೀರುವುದಿಲ್ಲ; ಅದನ್ನು ಸಾಮಾನ್ಯವಾಗಿ ಕ್ರಾಸ್ ಮಾಡಿದರೆ ಯಾರೇ ಬ್ಯಾಂಕರ್‌ನಿಗೆ ಮತ್ತು ವಿಶೇಷವಾಗಿ ಕ್ರಾಸ್ ಮಾಡಿದರೆ ನಿರ್ದಿಷ್ಟ ಬ್ಯಾಂಕರ್‌ನಿಗೆ ಉತ್ಪತ್ತಿಯನ್ನು ಸಂದಾಯ ಮಾಡಲು ಮಾತ್ರ ಅದು ಕಡ್ಡಾಯಪಡಿಸುತ್ತದೆ, ಆದುದರಿಂದ, ಪ್ರತ್ಯರ್ಜಿದಾರರು/ ದೂರುದಾರರು ಚೆಕ್‌ನ ಧನಾದೇಶಕನ ಮೇಲೆ ದಾವೆ ಹೂಡಲು ಹಕ್ಕುಳ್ಳವರಲ್ಲ ಎಂಬ ಅರ್ಜಿದಾರರ ವಾದವು ಕಾನೂನಿನ ಒಳ್ಳೆಯ ಪ್ರಸ್ತಾವವಲ್ಲ; ಇದಲ್ಲದೆ, ಅರ್ಜಿದಾರರು ನಿರ್ದೇಶಕರಾಗಿದ್ದ ಕಂಪನಿಯು ಪಡೆದ ಸಾಲದ ತೀರಿಕೆಗಾಗಿ ಅರ್ಜಿದಾರರು ನೀಡಿದ್ದ ಪ್ರಶ್ನೆಯಲ್ಲಿರುವ ಚೆಕ್ ಸಂಬಂಧವಾಗಿ ದೂರಿನಲ್ಲಿ ಮಾಡಿದ ವಾದಗಳನ್ನು ಉಲ್ಲೇಖಿಸಿ, ಅರ್ಜಿದಾರರು ನೀಡಿದ್ದ ಪ್ರಶ್ನೆಯಲ್ಲಿರುವ ಚೆಕ್‌ನ ಸಂಬಂಧ ಹೊಣೆಗಾರಿಕೆ ಅಸ್ತಿತ್ವದಲ್ಲಿತ್ತು; ಸದರಿ ವಾದಗಳ ಹಿನ್ನೆಲೆಯಲ್ಲಿ ಮತ್ತು ಎನ್.ಐ. ಅಧಿನಿಯಮದ 9ನೇ ಪ್ರಕರಣದಲ್ಲಿರುವ ನಿರ್ದಿಷ್ಟ ಉಪಬಂಧದ ಅಭಿಪ್ರಾಯದಲ್ಲಿ, ಪ್ರತ್ಯರ್ಜಿದಾರರು “ಭಾವಿ ಧಾರಕ” ಪದದ ಪರಿಭಾಷೆಯಲ್ಲಿ ಬರುತ್ತಾರೆ ಹಾಗೂ ಸದರಿ ಸಂದರ್ಭಗಳ ಮೇರೆಗೆ, ಮೇಲೆ ಹೇಳಿದ ಚೆಕ್‌ನ ನಿರಾಕರಣೆಗಾಗಿ ಅರ್ಜಿದಾರರ ವಿರುದ್ಧ ವ್ಯವಹರಣೆ ಹೂಡಲು ಪ್ರತ್ಯರ್ಜಿದಾರರು/ ದೂರುದಾರರು ಹಕ್ಕುಳ್ಳವರಾಗಿದ್ದಾರೆ ಎಂಬ ವಿಷಯಗಳ ಕಡೆಗೆ ಗಮನ ಸೆಳೆದಿದ್ದಾರೆ.

ನ್ಯಾಯಾಲಯದಲ್ಲಿ ವಾದಿಸಿದ ಪರಸ್ಪರರ ವಾದಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿ, ಸಂಬಂಧಪಟ್ಟ ನ್ಯಾಯವಾದಿಗಳು ಉಲ್ಲೇಖಿಸಿದ ನಿರ್ಣಯಗಳನ್ನು ಹಾಗೂ ದೂರಿನಲ್ಲಿ ಮಾಡಿದ ವಾದಗಳಿಗೆ ಸಂಬಂಧಿಸಿದಂತೆ ವರ್ಗಾವಣೀಯ ಲಿಖಿತಗಳ ಅಧಿನಿಯಮದ ಉಪಬಂಧಗಳನ್ನು ಅವಲೋಕಿಸಿದ ನಂತರ, ಪರಿಗಣನೆಗಾಗಿ ಉದ್ಭವಿಸುವ ಪ್ರಶ್ನೆಗಳೆಂದರೆ,–

1. ಚೆಕ್‌ನಲ್ಲಿ “ಧಾರಕ” ಪದವನ್ನು ಹೊಡೆದುಹಾಕಿರದಿದ್ದರೆ, “ಕ್ರಾಸ್ ಆದ” ಚೆಕ್‌ಅನ್ನು “ಧಾರಕ” ಚೆಕ್ ಎಂದು ಪರಿಗಣಿಸಬೇಕೇ?

2. ಪ್ರಸ್ತುತ ಮೊಕದ್ದಮೆಯಲ್ಲಿ ದೂರುದಾರರು, ಎನ್.ಐ. ಅಧಿನಿಯಮದ 9ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ "ಭಾವಿ ಧಾರಕ"ರಾಗಿರುವರೇ?

3. ಅರ್ಜಿದಾರರಿಗೆ ನೀಡಿದ ಸಮನ್‌ಗಳು, ಎನ್.ಐ. ಅಧಿನಿಯಮದ 138ನೇ ಪ್ರಕರಣಕ್ಕೆ ವಿರುದ್ಧವಾಗಿವೆಯೇ?

ಮೇಲಿನ ಪ್ರಶ್ನೆಗಳನ್ನು ಪರಸ್ಪರರ ವಾದಗಳ ಹಿನ್ನೆಲೆಯಲ್ಲಿ ಚರ್ಚಿಸಿ, ಅವರು ಮಂಡಿಸಿದ ದಾಖಲೆಗಳನ್ನು ಪರಿಶೀಲಿಸಿ ಮತ್ತು ಹಿಂದಿನ ತೀರ್ಪುಗಳನ್ನು ಅವಲೋಕಿಸಿದ ನಂತರ, ಚೆಕ್‌ಅನ್ನು ಕ್ರಾಸ್ ಮಾಡುವ ಮೂಲಕ ಮಾತ್ರವೇ, "ಅಥವಾ ಧಾರಕನಿಗೆ" ಎಂಬ ಪದಗಳನ್ನು ಹೊಡೆದುಹಾಕಿದ ಹೊರತು ಅಥವಾ "ವರ್ಗಾವಣೀಯವಲ್ಲ"ವೆಂದು ಅದರ ಮೇಲೆ ಯಾವುದೇ ನಿರ್ದಿಷ್ಟ ಗುರುತನ್ನು ಮಾಡಿದ ಹೊರತು, ಧಾರಕ ಚೆಕ್‌ನ ಲಕ್ಷಣವನ್ನು ಸದರಿ ಚೆಕ್ ಕಳೆದುಕೊಳ್ಳುವುದಿಲ್ಲವೆಂಬ ಇತ್ಯರ್ಥವಾದ ನಿಯಮವನ್ನಾಧರಿಸಿ ನಿರ್ಣಯಿಸಲಾಗಿದೆ. ಕಾನೂನಿನ ಈ ನಿಲುವಿನ ಹಿನ್ನೆಲೆಯಲ್ಲಿ, ಚೆಕ್‌ಅನ್ನು ಕ್ರಾಸ್ ಮಾಡಿದ ಕಾರಣದಿಂದ, ಸದರಿ ಚೆಕ್ ಧಾರಕ ಚೆಕ್ ಆಗಿರುವುದು ಕೊನೆಗೊಳ್ಳುತ್ತದೆ ಮತ್ತು ಅದರ ಉತ್ಪತ್ತಿಯನ್ನು ಭಾವಿ ಧಾರಕನಿಗೆ ಸಂದಾಯ ಮಾಡಲಾಗುವುದಿಲ್ಲ ಎಂಬ ಅರ್ಜಿದಾರರ ವಾದವು ನಿರಾಕರಣೆಗೆ ಯೋಗ್ಯವಾಗಿದ್ದು, ತದನುಸಾರವಾಗಿ ಅದನ್ನು ತಳ್ಳಿಹಾಕಲಾಗಿದೆ.

ಅರ್ಜಿದಾರರು ತಮ್ಮ ಬ್ಯಾಂಕರ್‌ನ ಹತ್ತಿರ ನಿರ್ವಹಿಸುತ್ತಿದ್ದ ಖಾತೆಯ ಆಧಾರದ ಮೇಲೆ ಪ್ರಶ್ನೆಯಲ್ಲಿರುವ ಚೆಕ್‌ಅನ್ನು ಪಡೆದು, ಎನ್.ಐ. ಅಧಿನಿಯಮದ 138ನೇ ಪ್ರಕರಣದ ಅಭಿಪ್ರಾಯದಲ್ಲಿ "ಇತರ ಹೊಣೆಗಾರಿಕೆ"ಯ ತೀರಿಕೆಗಾಗಿ ಪ್ರತ್ಯರ್ಜಿದಾರ ಬ್ಯಾಂಕಿಗೆ ನೀಡಿದ್ದರು ಎಂಬುದನ್ನು ದೂರುದಾರರು ಮೊದಲ ನೋಟದಲ್ಲೇ ಸಾಬೀತುಪಡಿಸಿದ್ದಾರೆ, ಅರ್ಜಿದಾರರು ಮಾತ್ರವೇ ಸದರಿ ಚೆಕ್‌ನ ನಿರಾಕರಣೆಯ ಪರಿಣಾಮಗಳಿಗೆ ಹೊಣೆಗಾರರಾಗಿರುತ್ತಾರೆ.

ಮೇಲಿನ ಚರ್ಚೆಯ ಹಿನ್ನೆಲೆಯಲ್ಲಿ, ಅರ್ಜಿದಾರರಿಗೆ ಸಮನುಗಳನ್ನು ನೀಡುವಲ್ಲಿ ಮಾನ್ಯ ದಂಡಾಧಿಕಾರಿಗಳು ಪ್ರಶ್ನಿತ ಆದೇಶವನ್ನು ಹೊರಡಿಸುವಲ್ಲಿ ಯಾವುದೇ ತಪ್ಪು ಅಥವಾ

**ಕಾನೂನುಬಾಹಿರತೆಯು ಈ ನ್ಯಾಯಾಲಯಕ್ಕೆ ಕಂಡುಬರುತ್ತಿಲ್ಲ. ತತ್ಪರಿಣಾಮವಾಗಿ, ಗುಣಾರ್ಹತೆಗಳು ಇಲ್ಲದಿರುವ ಈ ಅರ್ಜಿಯು ವಜಾಗೊಳ್ಳುವುದಕ್ಕೆ ಯೋಗ್ಯವಾಗಿದ್ದು, ತದನುಸಾರವಾಗಿ ಅದನ್ನು ವಜಾಗೊಳಿಸಲಾಗಿದೆ. ವಿಚಾರಣಾ ನ್ಯಾಯಾಲಯವು, ಕಾನೂನಿನಗನುಸಾರವಾಗಿ ವಿಚಾರಣೆಯನ್ನು ಮುಂದುವರಿಸತಕ್ಕದ್ದು ಎಂದು ನಿರ್ಣಯಿಸಿ, ಈ ಅರ್ಜಿಯನ್ನು ವಜಾಗೊಳಿಸಲಾಗಿದೆ.**

| ***ಉಲ್ಲೇಖಿಸಲಾದ ಮೊಕದ್ದಮೆಗಳು*** | ***ಪ್ಯಾರಾಗಳಲ್ಲಿ*** |
|---|---|
| *1. ಎಲ್‌ಎಡಬ್ಲುಎಸ್ (ಕೆಎಆರ್) 2018 3 341<br>ಕಿತ್ತೂರು ರಾಣಿ ಚೆನ್ನಮ್ಮ ಅರ್ಬನ್<br>ಸಹಕಾರ ಪತ್ತಿನ ಸಂಘ –ವಿರುದ್ಧ–<br>ಮಲ್ಲಿಕಾರ್ಜುನ್ ಗಂಗಾಧರ್ ಪಾಸಲ್ಕರ್* | *(ಉಲ್ಲೇ) 4* |
| *2. 1989 (2) ಕೆಲ್‌ಜೆ 410<br>ಇಂಡಿಯಾ ಸ್ಯಾರಿ ಹೌಸ್ ಮ್ಯೂಸಿಯಂ –ವಿರುದ್ಧ–<br>ಪಿ. ಕಾಪುಚಂದ್ ಮತ್ತು ಇತರರ* | *(ಉಲ್ಲೇ) 5* |
| *3. (2013) 5 ಕೆಎಲ್‌ಜೆ 89<br>ಬಿ. ಸರ್ವೋತ್ತಮ –ವಿರುದ್ಧ–<br>ಎಸ್.ಎಮ್. ಹನೀಫ್* | *(ಉಲ್ಲೇ) 5* |
| *4. ಸಿಆರ್‌ಎಮ್‌ಪಿ ಸಂಖ್ಯೆ. 956/2017 ಡಿಡಿ 20.02.2018<br>ಸಿಮೇಯ ಹರಿರಮಣಿ ಮತ್ತು ಇನ್ನೊಬ್ಬರು<br>–ವಿರುದ್ಧ– ಬ್ಯಾಂಕ್ ಆಫ್ ಬರೋಡ,<br>ಬಲಾಡೋ ಬಜಾರ್* | *(ಉಲ್ಲೇ) 5* |
| *5. ಸಿಆರ್‌ಎಲ್.ಎಮ್.ಸಿ. 2452/2009 ಡಿಡಿ 10ನೇ ಸೆಪ್ಟಂಬರ್, 2010<br>ಬ್ಯಾಂಕ್ ಆಫ್ ಇಂಡಿಯಾ –ವಿರುದ್ಧ–<br>ರಾಜ್ಯ ಮತ್ತು ಇತರರು* | *(ಉಲ್ಲೇ) 5* |

6. *(2015) 9 ಎಸ್‌ಸಿಸಿ 622*
*ಮೈನುದ್ದೀನ್ ಅಬ್ದುಲ್ ಸತ್ತಾರ್ ಶೇಖ್*
*–ವಿರುದ್ಧ– ವಿಜಯ್ ಡಿ. ಸಾಲ್ವಿ* *(ಉಲ್ಲೇ) 5*
7. *(2011) 13 ಎಸ್‌ಸಿಸಿ 148*
*ಅನೀಲ್ ಸಾಚಾರ್ ಮತ್ತು ಇನ್ನೊಬ್ಬರು*
*–ವಿರುದ್ಧ– ಶ್ರೀ ನಾಥ್ ಸ್ಪಿನ್ನರ್ಸ್ ಪ್ರೈ.ಲಿ. ಮತ್ತು ಇತರರು* *(ಉಲ್ಲೇ) 5*
8. *(2002) 6 ಎಸ್‌ಸಿಸಿ 426*
*ಐಸಿಡಿಎಸ್ ಲಿಮಿಟೆಡ್ –ವಿರುದ್ಧ–*
*ಬೀನಾ ಶಬೀರ್ ಮತ್ತು ಇನ್ನೊಬ್ಬರು* *(ಉಲ್ಲೇ) 5*
9. *1991 (1) ಬಿಸಿ 344*
*ಇಂಡಿಯಾ ಸ್ಯಾರಿ ಮ್ಯೂಸಿಯಂ –ವಿರುದ್ಧ–*
*ಪಿ. ಕರ್ಪೂರ್‌ಚಂದ್* *(ಉಲ್ಲೇ) 13(i)*
10. *2007 ಸಿಆರ್.ಎಲ್‌ಜೆ 2016*
*ಇನ್‌ಟೆಕ್ ನೆಟ್ ಲಿಮಿಟೆಡ್ –ವಿರುದ್ಧ– ರಾಜ್ಯ* *(ಉಲ್ಲೇ) 16*
11. *ಎಐಆರ್ 1952 ಅಲಹಾಬಾದ್ 590*
*ದುರ್ಗಾ ಷಾ ಮೋಹನ್ ಲಾಲ್ ಬ್ಯಾಂಕರ್ಸ್*
*–ವಿರುದ್ಧ– ಗವರ್ನರ್ ಜನರಲ್ ಇನ್ ಕೌನ್ಸಿಲ್* *(ಉಲ್ಲೇ) 18*

ಅರ್ಜಿದಾರರ ಪರ : ಶ್ರೀ ಕೆ. ಶ್ರೀಹರಿ, ನ್ಯಾಯವಾದಿ.
ಪ್ರತ್ಯರ್ಜಿದಾರರ ಪರ : ಶ್ರೀ ಜಿ.ಎನ್. ಸತ್ಯಮೂರ್ತಿ, ನ್ಯಾಯವಾದಿ

## ಆಜ್ಞೆ

**ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಜಾನ್ ಮೈಕೆಲ್ ಕುನ್ಹ:**

ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳ ಮತ್ತು ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳ ವಾದವನ್ನು ಆಲಿಸಲಾಯಿತು.

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ (V ನ್ಯಾಯಾಲಯ), ಮಂಗಳೂರು ಇವರ ಕಡತದಲ್ಲಿ ಇತ್ಯರ್ಥದಲ್ಲಿರುವ ಸಿ.ಸಿ. ಸಂಖ್ಯೆ: 764/2014ರಲ್ಲಿ ದೂರನ್ನು ರದ್ದುಗೊಳಿಸಲು ಕೋರಿ ಈ ಅರ್ಜಿಯನ್ನು ಸಲ್ಲಿಸಲಾಗಿದೆ.

2. ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಕದ್ರಿ ರಸ್ತೆ, ಪಂಪ್‌ವೆಲ್, ಮಂಗಳೂರು ಇಲ್ಲಿಂದ ಪಡೆದ 2,50,00,000/– ರೂ.ಗಳ (ಎರಡು ಕೋಟಿ ಐವತ್ತು ಲಕ್ಷ ರೂಪಾಯಿಗಳ) ಮೊತ್ತಕ್ಕೆ ಇದರಲ್ಲಿನ ಅರ್ಜಿದಾರರು ನೀಡಿದ ಚೆಕ್‌ನ ನಿರಾಕರಣೆಗಾಗಿ, ವರ್ಗಾವಣೀಯ ಲಿಖಿತಗಳ ಅಧಿನಿಯಮ, 1881ರ (ಸಂಕ್ಷಿಪ್ತವಾಗಿ "ಎನ್.ಐ. ಅಧಿನಿಯಮ") 138ನೇ ಪ್ರಕರಣದ ಅಡಿಯಲ್ಲಿ ಕ್ರಮ ಕೋರಿ, ಪ್ರತ್ಯರ್ಜಿದಾರರು– ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಇವರು, ದಂಡ ಪ್ರಕ್ರಿಯಾ ಸಂಹಿತೆಯ 200ನೇ ಪ್ರಕರಣದ ಅಡಿಯಲ್ಲಿ ದೂರನ್ನು ಸಲ್ಲಿಸಿದ್ದಾರೆ. ದೂರಿಗನುಗುಣವಾಗಿ, ಎಜಡ್‌ಟಿಇಸಿ ಡಿಜಿಟಲ್ಸ್ ಪ್ರೈವೇಟ್ ಲಿಮಿಟೆಡ್ ಇವರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಎಸ್‌ಎಮ್‌ಇ ಶಾಖೆ ಇವರಿಂದ ಸಾಲವನ್ನು ಪಡೆದಿದ್ದಾರೆ. ಸಾಲದ ಮೊತ್ತದ ಭಾಗದ ತೀರಿಕೆಗೆಂದು, ನಿರ್ದೇಶಕರು, ಇದರಲ್ಲಿನ ಅರ್ಜಿದಾರರು/ ಆರೋಪಿಯು ಮೇಲೆ ಹೇಳಿದ ಚೆಕ್‌ಅನ್ನು ನೀಡಿದ್ದಾರೆ. ಚೆಕ್ ಟ್ರಂಕೇಷನ್ ವ್ಯವಸ್ಥೆ ಮೂಲಕ ಸದರಿ ಚೆಕ್‌ಅನ್ನು ಹಣ ಸಂಗ್ರಹಕ್ಕಾಗಿ ಹಾಜರುಪಡಿಸಿದಾಗ, ಸಾಕಷ್ಟು ಹಣ ಇಲ್ಲವೆಂಬ ಕಾರಣದ ಮೇಲೆ ಅದನ್ನು ನಿರಾಕರಿಸಲಾಯಿತು. ಮಾನ್ಯ ದಂಡಾಧಿಕಾರಿಗಳು, ಮೇಲಿನ ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಂಡು ಅರ್ಜಿದಾರರಿಗೆ ಸಮನುಗಳನ್ನು ನೀಡಿದ್ದಾರೆ.

3. ದೂರಿನಲ್ಲಿ ಮಾಡಿದ ವಾದಗಳು ನೀರಸ ಮತ್ತು ಅಸ್ಪಷ್ಟವಾಗಿವೆ ಎಂಬ ಕಾರಣದ ಮೇಲೆ ವ್ಯವಹರಣೆಗಳನ್ನು ರದ್ದುಗೊಳಿಸಲು ಕೋರಿ ಅರ್ಜಿದಾರರು ಈ ನ್ಯಾಯಾಲಯುವನ್ನು ಸಂಪರ್ಕಿಸಿದ್ದಾರೆ. ಸಾಲ ಸೌಲಭ್ಯವನ್ನು ಕಂಪನಿಯು ಲಭ್ಯಗೊಳಿಸಿದೆಯೇ ಹೊರತು ಅರ್ಜಿದಾರರು/ ಆರೋಪಿಯು ಅಲ್ಲ; ಕಂಪನಿಯ ಪರವಾಗಿ ಅರ್ಜಿದಾರರು/ ಆರೋಪಿಯು ನೀಡಿದ್ದ ಪ್ರಶ್ನೆಯಲ್ಲಿರುವ ಚೆಕ್‌ಗೆ ಸಂಬಂಧಪಡುವಷ್ಟರಮಟ್ಟಿಗೆ ದೂರನ್ನು ಸಲ್ಲಿಸಲು, ದೂರುದಾರರು ಅಹವಾಲು

ಹೇಳಿಕೊಳ್ಳುವ ಹಕ್ಕನ್ನು ಹೊಂದಿಲ್ಲ; ಕಂಪನಿಯು, ಸದರಿ ಚೆಕ್‌ನ ''ಭಾವಿ ಧಾರಕ''ರಾಗಿದ್ದರಿಂದ, ಪ್ರಶ್ನೆಯಲ್ಲಿರುವ ಚೆಕ್‌ನ ಮೇಲೆ ದೂರುದಾರರು ಯಾವುದೇ ಹಕ್ಕನ್ನು ಹೊಂದಿರಲಿಲ್ಲ; ಅರ್ಜಿದಾರ/ ಆರೋಪಿ ಮತ್ತು ಪ್ರತ್ಯರ್ಜಿದಾರ/ ದೂರುದಾರ ಇವರ ನಡುವೆ ಯಾವುದೇ ವ್ಯವಹಾರವಾಗಿರಲಿಲ್ಲವಾದ್ದರಿಂದ, ಅರ್ಜಿದಾರರು ನೀಡಬಹುದಾಗಿದ್ದ ಚೆಕ್‌ನ ಸಂಬಂಧದಲ್ಲಿ ಯಾವುದೇ ಹೊಣೆಗಾರಿಕೆ ಇರಲಿಲ್ಲ; ಕಂಪನಿಯಿಂದ ಯಾವುದೇ ಹಿಂಬರಹ ಇಲ್ಲದಿರುವುದರಿಂದ, ಈ ಚೆಕ್‌ನ ''ಸಂದಾಯದಾರ'' ಅಥವಾ ''ಭಾವಿ ಧಾರಕ''ನ ವಿವರಣೆಗೆ ದೂರುದಾರರಿಗೆ ಉತ್ತರಿಸಲಾಗಿರುವುದಿಲ್ಲ; ಹಾಗಾಗಿ, ಎನ್.ಐ. ಅಧಿನಿಯಮದ 238(ಬಿ) ಪ್ರಕರಣದ ಉಪಬಂಧಗಳ ದೃಷ್ಟಿಯಲ್ಲಿ ಮೇಲೆ ಹೇಳಿದ ಚೆಕ್‌ನ ಸಂದಾಯಕ್ಕೆ ಬೇಡಿಕೆ ಇಡುವ ಯಾವುದೇ ಹಕ್ಕನ್ನು ದೂರುದಾರರು ಹೊಂದಿರುವುದಿಲ್ಲ ಎಂಬುದು ಅವರ ನಿವೇದನೆಯಾಗಿದೆ.

4. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಅರ್ಜಿಯಲ್ಲಿ ಒತ್ತಾಯಿಸಿದ ವಾದಗಳನ್ನನುಸರಿಸಿ ಮತ್ತು ದಿನಾಂಕ: 01.03.2018ರಂದು ನಿರ್ಣಯಿಸಿದ ***ಕ್ರಿಮಿನಲ್ ಪುನರೀಕ್ಷಣಾ ಅರ್ಜಿ ಸಂಖ್ಯೆ: 2321/2010ರಲ್ಲಿನ ಕಿತ್ತೂರು ರಾಣಿ ಚೆನ್ನಮ್ಮ ಅರ್ಬನ್ ಸಹಕಾರ ಪತ್ತಿನ ಸಂಘ –ವಿರುದ್ಧ– ಮಲ್ಲಿಕಾರ್ಜುನ್ ಗಂಗಾಧರ್ ಪಾಸಲ್ಕರ್***[1], ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ನಿರ್ಣಯವನ್ನವಲಂಬಿಸಿ ತಮ್ಮ ವಾದಗಳನ್ನು ಮಂಡಿಸಿದ್ದಾರೆ ಮತ್ತು ಅದರ 9ರಿಂದ 13ರವರೆಗಿನ ಕಂಡಿಕೆಗಳನ್ನು ಉಲ್ಲೇಖಿಸುವುದರೊಂದಿಗೆ, ಪ್ರಶ್ನೆಯಲ್ಲಿರುವ ಚೆಕ್ ಕ್ರಾಸ್ ಆಗಿದ್ದು, ಅದು ವರ್ಗಾವಣೀಯವಲ್ಲ ಮತ್ತು ಅದು ''ಧಾರಕ ಚೆಕ್'' ಅಲ್ಲವಾದ್ದರಿಂದ, ದೂರುದಾರರು ಎನ್.ಐ. ಅಧಿನಿಯಮದ 138ನೇ ಪ್ರಕರಣದ ಅಡಿಯಲ್ಲಿ ವ್ಯವಹರಣೆಗಳನ್ನು ಪ್ರಾರಂಭಿಸಲು ಹಕ್ಕುಳ್ಳವರಾಗಿರಲಿಲ್ಲ ಎಂದು ಒತ್ತಿ ಹೇಳಿದ್ದಾರೆ. ಆರೋಪಿತ ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳುವಲ್ಲಿ ಮತ್ತು ಅರ್ಜಿದಾರರಿಗೆ ಸಮನುಗಳನ್ನು ನೀಡುವಲ್ಲಿ ಮಾನ್ಯ ದಂಡಾಧಿಕಾರಿಗಳು ತಪ್ಪೆಸಗಿದ್ದಾರೆ ಎಂದು ವಾದಿಸಲಾಗಿದೆ.

1. ಎಲ್‌ಎಡಬ್ಲುಎಸ್ (ಕೆಎಆರ್) 2018 3 341

5. ಮೇಲಿನ ವಾದಕ್ಕೆ ಪ್ರತಿಯಾಗಿ ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ಚೆಕ್‌ನ ಅವಧಿಯ ಕಡೆಗೆ ನನ್ನ ಗಮನ ಸೆಳೆದು, ಚೆಕ್‌ನಲ್ಲಿರುವ "ಧಾರಕ" ಎಂಬ ಪದವನ್ನು ಹೊಡೆದುಹಾಕಿಲ್ಲವೆಂದು, ತತ್ಪರಿಣಾಮವಾಗಿ ಸದರಿ ಚೆಕ್, ಧಾರಕ ಚೆಕ್ ಆಗಿ ಉಳಿದಿದೆ; ಚೆಕ್‌ಅನ್ನು ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಕ್ರಾಸ್ ಮಾಡುವುದು ವರ್ಗಾವಣೀಯ ಲಿಖಿತದ ಮೇಲೆ ಪರಿಣಮಿಸುವುದಿಲ್ಲ; ಅದನ್ನು ಸಾಮಾನ್ಯವಾಗಿ ಕ್ರಾಸ್ ಮಾಡಿದರೆ ಯಾರೇ ಬ್ಯಾಂಕರ್‌ನಿಗೆ ಮತ್ತು ವಿಶೇಷವಾಗಿ ಕ್ರಾಸ್ ಮಾಡಿದರೆ ನಿರ್ದಿಷ್ಟ ಬ್ಯಾಂಕರ್‌ನಿಗೆ ಉತ್ಪತ್ತಿಯನ್ನು ಸಂದಾಯ ಮಾಡಲು ಮಾತ್ರ ಅದು ಕಡ್ಡಾಯಪಡಿಸುತ್ತದೆ; ಆದುದರಿಂದ, ಪ್ರತ್ಯರ್ಜಿದಾರರು/ ದೂರುದಾರರು ಚೆಕ್‌ನ ಧನಾದೇಶಕನ ಮೇಲೆ ದಾವೆ ಹೂಡಲು ಹಕ್ಕುಳ್ಳವರಲ್ಲ ಎಂಬ ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳ ವಾದವು ಕಾನೂನಿನ ಒಳ್ಳೆಯ ಪ್ರಸ್ತಾವವಲ್ಲ; ಇದಲ್ಲದೆ, ಅರ್ಜಿದಾರರು ನಿರ್ದೇಶಕರಾಗಿದ್ದ ಕಂಪನಿಯು ಪಡೆದ ಸಾಲದ ತೀರಿಕೆಗಾಗಿ ಅರ್ಜಿದಾರರು ನೀಡಿದ್ದ ಪ್ರಶ್ನೆಯಲ್ಲಿರುವ ಚೆಕ್ ಸಂಬಂಧವಾಗಿ ದೂರಿನಲ್ಲಿ ಮಾಡಿದ ವಾದಗಳನ್ನು ಉಲ್ಲೇಖಿಸಿ, ಅರ್ಜಿದಾರರು ನೀಡಿದ್ದ ಪ್ರಶ್ನೆಯಲ್ಲಿರುವ ಚೆಕ್‌ನ ಸಂಬಂಧದಲ್ಲಿ ಹೊಣೆಗಾರಿಕೆ ಅಸ್ತಿತ್ವದಲ್ಲಿತ್ತು; ಸದರಿ ವಾದಗಳ ಹಿನ್ನೆಲೆಯಲ್ಲಿ ಮತ್ತು ಎನ್.ಐ. ಅಧಿನಿಯಮದ 9ನೇ ಪ್ರಕರಣದಲ್ಲಿರುವ ನಿರ್ದಿಷ್ಟ ಉಪಬಂಧದ ಅಭಿಪ್ರಾಯದಲ್ಲಿ, ಪ್ರತ್ಯರ್ಜಿದಾರರು "ಭಾವಿ ಧಾರಕ" ಪದದ ಪರಿಭಾಷೆಯಲ್ಲಿ ಬರುತ್ತಾರೆ ಹಾಗೂ ಸದರಿ ಸಂದರ್ಭಗಳ ಮೇರೆಗೆ, ಮೇಲೆ ಹೇಳಿದ ಚೆಕ್‌ನ ನಿರಾಕರಣೆಗಾಗಿ ಅರ್ಜಿದಾರರ ವಿರುದ್ಧ ವ್ಯವಹರಣೆ ಹೂಡಲು ಪ್ರತ್ಯರ್ಜಿದಾರರು/ ದೂರುದಾರರು ಹಕ್ಕುಳ್ಳವರಾಗಿದ್ದಾರೆ ಎಂಬ ವಿಷಯಗಳ ಕಡೆಗೆ ಗಮನ ಸೆಳೆದಿದ್ದಾರೆ. ತಮ್ಮ ನಿವೇದನೆಯ ಸಮರ್ಥನೆಗೆ, ಪ್ರತ್ಯರ್ಜಿದಾರರ/ ದೂರುದಾರರ ಪರ ಮಾನ್ಯ ನ್ಯಾಯವಾದಿಗಳು ಈ ಮುಂದಿನ ತೀರ್ಪುಗಳನ್ನವಲಂಬಿಸಿದ್ದಾರೆ:

(1) ***ಇಂಡಿಯಾ ಸ್ಯಾರಿ ಹೌಸ್ ಮ್ಯೂಸಿಯಂ –ವಿರುದ್ಧ– ಪಿ. ಕಾಮಚಂದ್ ಮತ್ತು ಇತರರು***[2];

2. 1989(2) ಕೆಲ್‌ಜೆ 410

(2) ***ಬಿ. ಸರ್ವೋತ್ತಮ –ವಿರುದ್ಧ– ಎಸ್.ಎಮ್. ಹನೀಫ್***[3];

(3) ***ಸಿಮೇಯ ಹರಿರಮಣಿ ಮತ್ತು ಇನ್ನೊಬ್ಬರು –ವಿರುದ್ಧ– ಬ್ಯಾಂಕ್ ಆಫ್ ಬರೋಡ, ಬಲಾಡೋ ಬಜಾರ್ ಛತ್ತೀಸ್‌ಘಡ ಉಚ್ಚ ನ್ಯಾಯಾಲಯ, ಬಿಲಾಸ್‌ಪುರ್***[4];

(4) ***ಬ್ಯಾಂಕ್ ಆಫ್ ಇಂಡಿಯಾ –ವಿರುದ್ಧ– ರಾಜ್ಯ ಮತ್ತು ಇತರರು ದೆಹಲಿ ಉಚ್ಚ ನ್ಯಾಯಾಲಯ***[5]**;**

(5) ***ಮೈನುದ್ದೀನ್ ಅಬ್ದುಲ್ ಸತ್ತಾರ್ ಶೇಖ್ –ವಿರುದ್ಧ– ವಿಜಯ್ ಡಿ. ಸಾಳ್ವೆ***[6];

(6) ***ಅನೀಲ್ ಸಾಚಾರ್ ಮತ್ತು ಇನ್ನೊಬ್ಬರು –ವಿರುದ್ಧ– ಶ್ರೀ ನಾಥ್ ಸ್ಪಿನ್ನರ್ಸ್ ಪ್ರೈ.ಲಿ. ಮತ್ತು ಇತರರು***[7]; ಮತ್ತು

(7) ***ಐಸಿಡಿಎಸ್ ಲಿಮಿಟೆಡ್ –ವಿರುದ್ಧ– ಬೀನಾ ಶಬೀರ್ ಮತ್ತು ಇನ್ನೊಬ್ಬರು***[8].

6. ನ್ಯಾಯಾಲಯದಲ್ಲಿ ವಾದಿಸಿದ ಪರಸ್ಪರರ ವಾದಗಳನ್ನು ನಾನು ಎಚ್ಚರಿಕೆಯಿಂದ ಪರಿಶೀಲಿಸಿದ್ದೇನೆ ಮತ್ತು ಸಂಬಂಧಪಟ್ಟ ನ್ಯಾಯವಾದಿಗಳು ಉಲ್ಲೇಖಿಸಿದ ನಿರ್ಣಯಗಳನ್ನು ಹಾಗೂ ದೂರಿನಲ್ಲಿ ಮಾಡಿದ ವಾದಗಳಿಗೆ ಸಂಬಂಧಿಸಿದಂತೆ ವರ್ಗಾವಣೀಯ ಲಿಖಿತಗಳ ಅಧಿನಿಯಮದ ಉಪಬಂಧಗಳನ್ನು ಅವಲೋಕಿಸಿದ್ದೇನೆ.

---

3. (2013) 5 ಕೆಎಲ್ಎ 89
4. ಸಿಆರ್ಎಮ್‌ಪಿ ಸಂಖ್ಯೆ. 956/2017 ಡಿಡಿ 20.02.2018
5. ಸಿಆರ್ಎಲ್.ಎಮ್.ಸಿ. 2452/2009 ಡಿಡಿ 10ನೇ ಸೆಪ್ಟಂಬರ್, 2010
6. (2015) 9 ಎಸ್‌ಸಿಸಿ 622
7. (2011) 13 ಎಸ್‌ಸಿಸಿ 1488.
8. (2002) 6 ಎಸ್‌ಸಿಸಿ 426

7. ಪಕ್ಷಕಾರರು ವಾದಿಸಿದ ವಾದಗಳ ಹಿನ್ನೆಲೆಯಲ್ಲಿ, ಪರಿಗಣನೆಗಾಗಿ ಉದ್ಭವಿಸುವ ಪ್ರಶ್ನೆಗಳೆಂದರೆ,-

1. ಚೆಕ್‌ನಲ್ಲಿ "ಧಾರಕ" ಪದವನ್ನು ಹೊಡೆದುಹಾಕಿರದಿದ್ದರೆ, "ಕ್ರಾಸ್ ಆದ" ಚೆಕ್‌ಅನ್ನು "ಧಾರಕ" ಚೆಕ್ ಎಂದು ಪರಿಗಣಿಸಬೇಕೇ?

2. ಪ್ರಸ್ತುತ ಮೊಕದ್ದಮೆಯಲ್ಲಿ ದೂರುದಾರರು, ಎನ್.ಐ. ಅಧಿನಿಯಮದ 9ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ "ಭಾವಿ ಧಾರಕ"ರಾಗಿರುವರೇ?

3. ಅರ್ಜಿದಾರರಿಗೆ ನೀಡಿದ ಸಮನ್‌ಗಳು, ಎನ್.ಐ. ಅಧಿನಿಯಮದ 138ನೇ ಪ್ರಕರಣಕ್ಕೆ ವಿರುದ್ಧವಾಗಿವೆಯೇ?

8. ಚರ್ಚೆಯ ಪುನರಾವರ್ತನೆಯನ್ನು ತಪ್ಪಿಸಲು ಈ ಎಲ್ಲಾ ಮೂರು ಪ್ರಶ್ನೆಗಳನ್ನು ಒಟ್ಟಿಗೆ ಪರಿಗಣನೆಗೆ ತೆಗೆದುಕೊಳ್ಳಲಾಗಿದೆ. ಪ್ರಶ್ನೆಯಲ್ಲಿರುವ ಚೆಕ್‌ಅನ್ನು ಅರ್ಜಿದಾರರು ನಿರ್ವಹಿಸುತ್ತಿದ್ದ ಖಾತೆಯ ಆಧಾರದ ಮೇಲೆ ಅವರು ಪಡೆದುಕೊಂಡಿದ್ದರು ಎಂಬ ಸಂಗತಿಯನ್ನು ಅವರು ವಿವಾದಗೊಳಿಸಿರುವುದಿಲ್ಲವೆಂಬುದು ಗಮನಿಸಬೇಕಾದ ಮೊದಲ ಅಂಶವಾಗಿದೆ. ಚೆಕ್‌ಅನ್ನು ಎಜಡ್‌ಟಿಇಸಿ ಡಿಜಿಟಲ್ಸ್ ಪ್ರೈವೇಟ್ ಲಿಮಿಟೆಡ್ ಹೆಸರಿನಲ್ಲಿ ಪಡೆಯಲಾಗಿತ್ತು ಮತ್ತು ಅದನ್ನು ಕ್ರಾಸ್ ಮಾಡಲಾಗಿತ್ತು ಹಾಗೂ ಅದನ್ನು ಪ್ರತ್ಯರ್ಜಿದಾರರ/ ದೂರುದಾರರ ಹೆಸರಿನಲ್ಲಿ ಹಿಂಬರಹಗೊಳಿಸಲಾಗಿರುವುದಿಲ್ಲ, ಸದರಿ ಚೆಕ್‌ಗೆ ದೂರುದಾರರು ಯಾವುದೇ ಸ್ವಾಮ್ಯವನ್ನು ಹೊಂದುವುದಿಲ್ಲ ಮತ್ತು ಅದರಿಂದಾಗಿ ಎನ್.ಐ. ಅಧಿನಿಯಮದ 138ನೇ ಪ್ರಕರಣದ ಅಡಿಯಲ್ಲಿ ಅರ್ಜಿದಾರರ ವಿರುದ್ಧ ವ್ಯವಹರಣೆ ಜರುಗಿಸಲು ಅದು ಹಕ್ಕುಳ್ಳದ್ದಾಗಿಲ್ಲ ಎಂಬುದು ಅರ್ಜಿದಾರರು ಒತ್ತಾಯಿಸಿದ ಏಕಮಾತ್ರ ವಾದವಾಗಿದೆ.

9. ಪ್ರಶ್ನೆಯಲ್ಲಿರುವ ಚೆಕ್‌ಅನ್ನು ಎಜಡ್‌ಟಿಇಸಿ ಡಿಜಿಟಲ್ಸ್ ಪ್ರೈವೇಟ್ ಲಿಮಿಟೆಡ್ ಹೆಸರಿನಲ್ಲಿ ಪಡೆಯಲಾಗಿತ್ತು ಮತ್ತು ಚೆಕ್‌ನಲ್ಲಿ ಕಂಡುಬರುವ “ಧಾರಕ” ಪದವನ್ನು ಹೊಡೆದುಹಾಕಿರಲಿಲ್ಲ ಎಂಬ ಸಂಗತಿಗೆ ಸಂಬಂಧಿಸಿದಂತೆ ಯಾವುದೇ ವಿವಾದವಿಲ್ಲ. ಆದುದರಿಂದ ನಾವು ಈ ಅವಿವಾದಿತ ಸಂಗತಿಗಳ ಆಧಾರದ ಮೇಲೆ ಮುಂದುವರಿಯಬೇಕಾಗುತ್ತದೆ. ಪ್ರಶ್ನೆಯಲ್ಲಿರುವ ಸದರಿ ಚೆಕ್, ನಿರ್ದೇಶಕರ ಪೈಕಿ ಒಬ್ಬ ನಿರ್ದೇಶಕಾಗಿರುವ ಅರ್ಜಿದಾರರು, ಎಜಡ್‌ಟಿಇಸಿ ಡಿಜಿಟಲ್ಸ್ ಪ್ರೈವೇಟ್ ಲಿಮಿಟೆಡ್‌ನಿಂದ ಬರಬೇಕಾಗಿದ್ದ ಸಾಲದ ತೀರಿಕೆಗಾಗಿ ಪ್ರತ್ಯರ್ಜಿದಾರ/ ದೂರುದಾರ ಬ್ಯಾಂಕ್‌ಗೆ ಹಸ್ತಾಂತರಿಸಿದ್ದ ಚೆಕ್ ಆಗಿದೆ ಎಂಬ ಪೂರ್ವೋಕ್ತದ ಆಧಾರದ ಮೇಲೆ ಅದು ಮುಂದುವರಿದಿದ್ದು, ಅದರಿಂದಾಗಿ, ಎನ್.ಐ. ಅಧಿನಿಯಮದ 9ನೇ ಪ್ರಕರಣದ ಅಡಿಯಲ್ಲಿ ದೂರುದಾರರನ್ನು “ಭಾವಿ ಧಾರಕ”ರೆಂದು ಪರಿಭಾಷಿಸಲಾಗಿದೆ.

10. ಎನ್.ಐ. ಅಧಿನಿಯಮದ 9ನೇ ಪ್ರಕರಣವು, “ಭಾವಿ ಧಾರಕ” ಪದಾವಳಿಯನ್ನು ಪರಿಭಾಷಿಸುತ್ತದೆ. ಈ ಪರಿಭಾಷೆಯ ಪ್ರಕಾರ “ಭಾವಿ ಧಾರಕ” ಎಂದರೆ, ಪ್ರಾಮಿಸರಿ ನೋಟ್‌ನ, ವಿನಿಮಯ ಪತ್ರದ ಅಥವಾ ಚೆಕ್‌ನ ಸ್ವಾಧೀನದಾರನು, ಅದರ ಧಾರಕನಿಗೆ ಅಥವಾ ಹಣ ಪಡೆಯುವವನಿಗೆ ಅಥವಾ ಹಿಂಬರಹದಾರನಿಗೆ ಪ್ರತಿಫಲಕ್ಕಾಗಿ ಸಂದಾಯ ಮಾಡಬಹುದಾಗಿರುವ ಯಾರೇ ವ್ಯಕ್ತಿ ಎಂದು ಅರ್ಥ. “ಭಾವಿ ಧಾರಕ”ನೆಂದು ವರ್ಗಾವಣೀಯ ಲಿಖಿತಕ್ಕೆ ಹಕ್ಕನ್ನು ಕ್ಲೇಮು ಮಾಡುವ ಸಲುವಾಗಿ, ವರ್ಗಾವಣೀಯ ಲಿಖಿತದ ಸ್ವಾಧೀನ ಹೊಂದಿರುವ ವ್ಯಕ್ತಿಯ ಹೆಸರಿನಲ್ಲಿ ಅದನ್ನು ಪಡೆಯಬೇಕು ಎಂಬುದನ್ನು ಈ ಪರಿಭಾಷೆಯು ಅಗತ್ಯಪಡಿಸುತ್ತದೆ. 9ನೇ ಪ್ರಕರಣದ ಅಗತ್ಯತೆಗಳನ್ನು ಈಡೇರಿಸುವ ಸಲುವಾಗಿ, ವರ್ಗಾವಣೀಯ ಲಿಖಿತದ ಹಕ್ಕನ್ನು ಕ್ಲೇಮು ಮಾಡುವ ವ್ಯಕ್ತಿಯು, ಕೆಲವು ಪ್ರತಿಫಲಕ್ಕಾಗಿ ಚೆಕ್‌ನ ಅಥವಾ ಪ್ರಾಮಿಸರಿ ನೋಟ್‌ನ ಸ್ವಾಧೀನದಾರನಾಗಬೇಕೆಂಬುದನ್ನು ಅತ್ಯಗತ್ಯವಾಗಿ ಸಾಬೀತುಪಡಿಸಬೇಕಾಗುತ್ತದೆ. ಮೇಲಿನ ಯಾವುದೇ ಒಂದು ಅಗತ್ಯವನ್ನು ಅಥವಾ ಪೂರ್ವಷರತ್ತನ್ನು ಈಡೇರಿಸಿದರೆ, ಈ ಪರಿಭಾಷೆಯ ಉದ್ದೇಶಕ್ಕೆ ಸಾಕಾಗುತ್ತದೆ. ಈ ಪ್ರಕರಣವು “ಅಥವಾ” ಎಂಬ ಪರ್ಯಾಯವಾಚಿಯನ್ನು ಬಳಸಿದೆ ಎಂಬುದು ಸ್ಪಷ್ಟವಾಗಿದ್ದು, ಹಿಂಬರಹವಿಲ್ಲದೆ ಇದ್ದರೂ ಸಹ, ಮೌಲಿಕ ಪ್ರತಿಫಲಕ್ಕಾಗಿ,

ವರ್ಗಾವಣೀಯ ಲಿಖಿತವನ್ನು ಧಾರಕನ ಸ್ವಾಧೀನದಲ್ಲಿದೆಯೆಂದು ತೋರಿಸಿದರೆ, ಎನ್.ಐ. ಅಧಿನಿಯಮದ 9ನೇ ಪ್ರಕರಣದ ಅಗತ್ಯವನ್ನು ಈಡೇರಿಸಲಾಗಿದೆ ಎಂದು ನಿರ್ಣಯಿಸಬೇಕು.

11. ಪ್ರಸ್ತುತ ಮೊಕದ್ದಮೆಯಲ್ಲಿ, ದೂರುದಾರ–ಬ್ಯಾಂಕ್‌ನ ಹೆಸರಿನಲ್ಲಿ ಯಾವುದೇ ಹಿಂಬರಹ ಇರುವುದಿಲ್ಲ. ಏನೇ ಆಗಿದ್ದರೂ, ಮೌಲಿಕ ಪ್ರತಿಫಲಕ್ಕಾಗಿ, ಎಂದರೆ ಅರ್ಜಿದಾರರು ನಿರ್ದೇಶಕರಾಗಿದ್ದ ಎಜಡ್‌ಟಿಇಸಿ ಡಿಜಿಟಲ್ಸ್ ಪ್ರೈವೇಟ್ ಲಿಮಿಟೆಡ್ ಇದಕ್ಕೆ ಬರಬೇಕಿದ್ದ ಸಾಲದ ತೀರಿಕೆಗಾಗಿ, ದೂರುದಾರರು ಪ್ರಶ್ನೆಯಲ್ಲಿರುವ ಚೆಕ್‌ಅನ್ನು ಸ್ವೀಕರಿಸಿದ್ದರು ಎಂಬ ದೂರಿನಲ್ಲಿ ಸ್ಪಷ್ಟ ವಾದಗಳಿರುವುದರಿಂದ, ನನ್ನ ಅಭಿಪ್ರಾಯದಲ್ಲಿ, ಸದರಿ ದೂರುದಾರ ಬ್ಯಾಂಕ್, ಎನ್.ಐ. ಅಧಿನಿಯಮದ 9ನೇ ಪ್ರಕರಣದ ಅಡಿಯಲ್ಲಿನ ಪರಿಭಾಷೆಯಾದ "ಭಾವಿ ಧಾರಕ" ಪದದ ವಿವರಣೆಯಲ್ಲಿ ಬರುತ್ತದೆ.

12. ಹಿಂಬರಹವೊಂದೇ ಚೆಕ್‌ಅನ್ನು ವರ್ಗಾವಣೆ ಮಾಡಬಹುದಾಗಿರುವ ವಿಧಾನವಾಗಿರುವುದಿಲ್ಲ. "ವರ್ಗಾವಣೆ" ಪದವನ್ನು ಎನ್.ಐ. ಅಧಿನಿಯಮದ 14ನೇ ಪ್ರಕರಣದ ಅಡಿಯಲ್ಲಿ ಈ ಕೆಳಗಿನಂತೆ ಪರಿಭಾಷಿಸಲಾಗಿದೆ:

> *"**14. ವರ್ಗಾವಣೆ.**– ಪ್ರಾಮಿಸರಿ ನೋಟ್, ವಿನಿಮಯ ಪತ್ರ ಅಥವಾ ಚೆಕ್‌ಅನ್ನು ಯಾರೇ ವ್ಯಕ್ತಿಗೆ, ಆ ವ್ಯಕ್ತಿಯನ್ನು ಅದರ ಧಾರಕನನ್ನಾಗಿ ಸ್ಥಾಪಿಸುವ ಸಲುವಾಗಿ ವರ್ಗಾಯಿಸಿದಾಗ, ಆ ಲಿಖಿತವನ್ನು ವರ್ಗಾವಣೀಯವಾಗಿದೆ ಎಂದು ಹೇಳಲಾಗುತ್ತದೆ."*

ಈ ಉಪಬಂಧದ ಅಭಿಪ್ರಾಯದಲ್ಲಿ, ಪರಿಗಣನೆಗಾಗಿ ಲಿಖಿತದ ರವಾನೆಯು ಸಹ ಸಿಂಧುವಾದ ವರ್ಗಾವಣೆಯಾಗಬಹುದು.

13(i) ಕರಾರಿನಲ್ಲಿನ ಪ್ರತಿಫಲವನ್ನು, ಯಾರೇ ವ್ಯಕ್ತಿಯು, ಮೂರನೇ ಪಕ್ಷಕಾರರು ಸಹ ಒದಗಿಸಬಹುದಾಗಿದೆ ಎಂಬುದು ಸರ್ವೇಸಾಮಾನ್ಯ ಕಾನೂನಾಗಿದೆ. ಪ್ರಸ್ತುತ

ಸಾಲವನ್ನು ಸಿಂಧುವಾದ ಪ್ರತಿಫಲವೆಂದು ಯಾವಾಗಲೂ ಪರಿಗಣಿಸಲಾಗಿದೆ. ***ಇಂಡಿಯಾ ಸ್ಯಾರಿ ಮ್ಯೂಸಿಯಂ –ವಿರುದ್ಧ– ಪಿ. ಕರ್ಪೂರ್‌ಚಂದ್***[9]**,** ಮೊಕದ್ದಮೆಯಲ್ಲಿ, ಈ ನ್ಯಾಯಾಲಯವು, ಹಿಂಬರಹ ಪಡೆಯುವವನು ಮಾತ್ರವಲ್ಲದೆ, ಪ್ರತಿಫಲಕ್ಕಾಗಿ ವರ್ಗಾವಣೀಯ ಲಿಖಿತಗಳ ಸ್ವಾಧೀನವನ್ನು ಪಡೆಯುವ ವ್ಯಕ್ತಿಯು ಸಹ ಭಾವಿ ಧಾರಕನಾಗುತ್ತಾನೆ ಎಂದು ನಿರ್ಣಯಿಸಿದೆ. ಆದುದರಿಂದ, ಕಂಪನಿಯ ಸಾಲದ ತೀರಿಕೆಗಾಗಿ ಚೆಕ್‌ಅನ್ನು ನೀಡಲಾಗಿತ್ತು ಎಂದು ನ್ಯಾಯಾಲಯಕ್ಕೆ ಮನವರಿಕೆಯಾಗುವಂತೆ ಒಮ್ಮೆ ಸಾಬೀತುಪಡಿಸಿದರೆ, ಬ್ಯಾಂಕ್‌ಅನ್ನು ಅವಶ್ಯವಾಗಿ "ಭಾವಿ ಧಾರಕ" ಎಂದು ಪರಿಗಣಿಸಬಹುದಾಗಿದೆ.

(ii) ಬ್ಯಾಂಕು, ಅದರ ಗ್ರಾಹಕನಿಗೆ ನೀಡಿದ ಸಾಲವನ್ನು ಯಾರೇ ಮೂರನೇ ವ್ಯಕ್ತಿಯು ತೀರಿಸಬಹುದಾಗಿದ್ದು, ಆ ಮೂರನೇ ವ್ಯಕ್ತಿಯು, ಗ್ರಾಹಕನು ಸಂದಾಯ ಮಾಡಬಹುದಾದ ಹೊಣೆಗಾರಿಕೆಯನ್ನು ತೀರಿಸುವುದಾಗಿ ಬ್ಯಾಂಕ್‌ಗೆ ಭರವಸೆ ನೀಡಿ ಗ್ರಾಹಕನ ಹೆಸರಿನಲ್ಲಿ ಚೆಕ್‌ಅನ್ನು ನೀಡಿದರೆ, ಆಗ ಬ್ಯಾಂಕ್ ಬಳಿ ಇರುವ ಚೆಕ್‌ಅನ್ನು ಮೌಲಿಕ ಪ್ರತಿಫಲಕ್ಕಾಗಿ ಎಂದು ಪರಿಗಣಿಸಬೇಕಾಗುತ್ತದೆ. ಆ ಅಭಿಪ್ರಾಯದಲ್ಲಿ ಸಹ, ಪ್ರತ್ಯರ್ಜಿದಾರ ಬ್ಯಾಂಕ್ "ಭಾವಿ ಧಾರಕ" ಆಗುತ್ತದೆ.

(iii) ***ಅನೀಲ್ ಸಾಚಾರ್ ಮತ್ತು ಇನ್ನೊಬ್ಬರು –ವಿರುದ್ಧ– ಶ್ರೀ ನಾಥ್ ಸ್ಪಿನ್ನರ್ಸ್ ಪ್ರೈವೇಟ್ ಲಿಮಿಟೆಡ್ ಮತ್ತು ಇತರರು,*** (ಮೇಲಿನ) ಮೊಕದ್ದಮೆಯ 20ನೇ ಕಂಡಿಕೆಯಲ್ಲಿ ಈ ಕೆಳಗಿನಂತೆ ಅಭಿಪ್ರಾಯಪಡಲಾಗಿದೆ:

> *"20. ಐಸಿಡಿಎಸ್ ಲಿಮಿಟೆಡ್ ಮೊಕದ್ದಮೆಯಲ್ಲಿ ಈ ನ್ಯಾಯಾಲಯವು ನೀಡಿದ ತೀರ್ಪನ್ನು ಸಹ ನಾವು ಪರಾಮರ್ಶಿಸಬಹುದಾಗಿದೆ. ಸದರಿ ತೀರ್ಪಿನಲ್ಲಿ, ಚೆಕ್‌ಅನ್ನು ಬರೆದಂಥ ವ್ಯಕ್ತಿಯು ಭರಿಸಬೇಕಾಗಿರುವ ಹೊಣೆಗಾರಿಕೆಯ ಸ್ವರೂಪಕ್ಕೆ*

9. 1991(1) ಬಿಸಿ 344

*ಸಂಬಂಧಿಸಿದಂತೆ ಈ ನ್ಯಾಯಾಲಯವು ಪರಾಮರ್ಶಿಸಿದೆ. ಬೇರೊಬ್ಬರು ಭರಿಸಬೇಕಾಗಬಹುದಾಗಿದ್ದ ಯಾವುದೇ ಹೊಣೆಗಾರಿಕೆ ಅಥವಾ ಸಾಲಕ್ಕಾಗಿ ಚೆಕ್‌ಅನ್ನು ನೀಡಿದ್ದರೂ ಸಹ, ಚೆಕ್‌ಅನ್ನು ಬರೆದ ವ್ಯಕ್ತಿಯನ್ನು ಅಧಿನಿಯಮದ 138ನೇ ಪ್ರಕರಣದ ಅಡಿಯಲ್ಲಿ ಹೊಣೆಗಾರನನ್ನಾಗಿ ಮಾಡಬಹುದಾಗಿದೆ. ಮೇಲೆ ಹೇಳಿದ ತೀರ್ಪಿನಲ್ಲಿನ ಸುಸಂಗತ ಅಭಿಪ್ರಾಯವು ಈ ಕೆಳಗಿನಂತಿದೆ:*

> *"138ನೇ ಪ್ರಕರಣದಲ್ಲಿ ಬರುವ 'ಯಾವುದೇ ಚೆಕ್' ಮತ್ತು 'ಇತರ ಹೊಣೆಗಾರಿಕೆ' ಪದಗಳು, ಎರಡು ಮುಖ್ಯ ಅಭಿವ್ಯಕ್ತಿಗಳಾಗಿದ್ದು, ಅವು, ಶಾಸನದ ಉಪಬಂಧಗಳ ಪರಿಧಿಯೊಳಗೆ ವಾಸ್ತವಿಕ ಸಂದರ್ಭವನ್ನು ತರುವ ಸಲುವಾಗಿ ಕಾನೂನಿನ ಉದ್ದೇಶವನ್ನು ಸ್ಪಷ್ಟಪಡಿಸುವಂತೆ ನಿಲ್ಲುತ್ತವೆ. ಯಾವುದೇ ಕಾರಣಕ್ಕಾಗಿಯಾಗಲಿ, 138ನೇ ಪ್ರಕರಣದ ಅಡಿಯಲ್ಲಿ ಹೊಣೆಗಾರಿಕೆಯನ್ನು, ಹಣ ಸಂದಾಯವಾಗಿರದ ಬ್ಯಾಂಕರ್‌ನು ಹಿಂದಿರುಗಿಸದ ಚೆಕ್‌ನ ಸಂದರ್ಭದಲ್ಲಿ ತಪ್ಪಿಸಲಾಗುವುದಿಲ್ಲವೆಂಬುದಾಗಿ ಈ ಅಭಿವ್ಯಕ್ತಿಗಳು ಯಾವುದೇ ರೀತಿಯಲ್ಲೂ ಸಂಶಯಗಳನ್ನುಳಿಸುವುದಿಲ್ಲ. ಯಾವುದೇ ತದ್ವಿರುದ್ಧವಾದ ಅರ್ಥವಿವರಣೆಯು ಶಾಸನದ ಉದ್ದೇಶವನ್ನು ವಿಫಲಗೊಳಿಸುವುದಿಲ್ಲ. ಖಾತರಿ ಪಡೆದ ವ್ಯಕ್ತಿ ಮತ್ತು ಖಾತರಿದಾರರ ಹೊಣೆಗಾರಿಕೆಯ ವಿಷಯದ ಮೂಲಕ ಉಚ್ಚ ನ್ಯಾಯಾಲಯವು ವ್ಯವಹರಿಸಿದ್ದು, ಅದರಿಂದಾಗಿ, ಅಧಿನಿಯಮದ 138ನೇ ಪ್ರಕರಣದ ನೈಜ ಉದ್ದೇಶವನ್ನು ಮತ್ತು ತಾತ್ಪರ್ಯವನ್ನು ನಿರ್ಲಕ್ಷಿಸಿದೆ.*

14. ಎನ್.ಐ. ಅಧಿನಿಯಮದ 138ನೇ ಪ್ರಕರಣದ ಉಪಬಂಧಗಳನ್ನು ಅವಲಂಬಿಸಿ, ಭಾವಿ ಧಾರಕನ ಹಕ್ಕಿನ ವಿಷಯಕ್ಕೆ ಸಂಬಂಧಪಡುವಷ್ಟರಮಟ್ಟಿಗೆ

ಮನವರಿಕೆಯಾಗಬೇಕಾದ ಮೊದಲ ಮತ್ತು ಅತ್ಯಂತ ಅವಶ್ಯಕ ಅಗತ್ಯವೆಂದರೆ, ಚೆಕ್‌ನ ನಿರಾಕರಣೆಗೆ ಹೊಣೆ ಮಾಡಬೇಕಾಗಿರುವ ವ್ಯಕ್ತಿಯು, ಚೆಕ್‌ನ ಧನಾದೇಶಕನಾಗಿರಬೇಕು ಹಾಗೂ ಎರಡನೆಯದಾಗಿ, ಯಾವುದೇ ಸಾಲ ಅಥವಾ ಇತರ ಹೊಣೆಗಾರಿಕೆಯನ್ನು ಪೂರ್ತಿಯಾಗಿ ಅಥವಾ ಭಾಗಶಃವಾಗಿ, ಸಾಲ ತೀರಿಕೆಗಾಗಿ ಇರುವ ಖಾತೆಯಿಂದ ಯಾರೇ ವ್ಯಕ್ತಿಗೆ ಹಣದ ಯಾವುದೇ ಮೊತ್ತದ ಸಂದಾಯಕ್ಕಾಗಿ ಬ್ಯಾಂಕರ್‌ನೊಂದಿಗೆ ಆತನು ನಿರ್ವಹಿಸುತ್ತಿರುವ ಖಾತೆಯ ಚೆಕ್‌ಅನ್ನು ಆತನು ಪಡೆಯಬೇಕು. ಎನ್.ಐ. ಅಧಿನಿಯಮದ 138ನೇ ಪ್ರಕರಣದ ಉಪಬಂಧದ ಸರಳ ಓದುವಿಕೆಯಿಂದಲೇ, ವ್ಯಕ್ತಿಯ ಸಾಲದ ಅಥವಾ "ಇತರ ಹೊಣೆಗಾರಿಕೆ"ಯ ತೀರಿಕೆಗಾಗಿ, ತಾನು ನಿರ್ವಹಿಸುತ್ತಿರುವ ಖಾತೆಯ ಆಧಾರದ ಮೇಲೆ ಚೆಕ್‌ಅನ್ನು ಪಡೆಯುವ ವ್ಯಕ್ತಿಗೆ ಎನ್.ಐ. ಅಧಿನಿಯಮದ 138ನೇ ಪ್ರಕರಣದ ಉಪಬಂಧದ ನಿಯಮಗಳು ಅನ್ವಯವಾಗುತ್ತವೆ ಎಂಬುದು ಸ್ಪಷ್ಟವಾಗುತ್ತದೆ.

15. ಪ್ರಸ್ತುತ ಮೊಕದ್ದಮೆಯಲ್ಲಿ, ಸಂಶಯವೇ ಇಲ್ಲದಂತೆ, ದೂರುದಾರರನ್ನು ಮೇಲೆ ಹೇಳಿದ ಚೆಕ್‌ನ "ಸ್ವೀಕರ್ತ"ನನ್ನಾಗಿ ವಿವರಿಸಿರುವುದಿಲ್ಲ, ಆದಾಗ್ಯೂ, ಪ್ರಶ್ನೆಯಲ್ಲಿರುವ ಚೆಕ್ ಅವಶ್ಯಕವಾಗಿ "ಧಾರಕ" ಚೆಕ್ ಆಗಿ ಉಳಿದಿದೆ. ಚೆಕ್‌ಅನ್ನು ಕ್ರಾಸ್ ಮಾಡಿದ ಕಾರಣಕ್ಕಾಗಿ, ಪ್ರಶ್ನೆಯಲ್ಲಿರುವ ಚೆಕ್, ಧಾರಕ ಚೆಕ್‌ನ ಲಕ್ಷಣವನ್ನು ಕಳೆದುಕೊಂಡಿತ್ತು ಮತ್ತು ವರ್ಗಾವಣೀಯವಾಗಿರಲಿಲ್ಲ, ಬ್ಯಾಂಕಿಂಗ್ ಆಚರಣೆಯಲ್ಲಾಗಲಿ ಅಥವಾ ಎನ್.ಐ. ಅಧಿನಿಯಮದ ಉಪಬಂಧಗಳಲ್ಲಾಗಲಿ, ಅದಕ್ಕೆ ಸಮರ್ಥನೆಯಿರುವುದಿಲ್ಲ.

16. ***ಇನ್‌ಟೆಕ್ ನೆಟ್ ಲಿಮಿಟೆಡ್ –ವಿರುದ್ಧ– ರಾಜ್ಯ***[10], ಮೊಕದ್ದಮೆಯಲ್ಲಿ ಆಂಧ್ರ ಪ್ರದೇಶ ಉಚ್ಚ ನ್ಯಾಯಾಲಯವು, ಒಮ್ಮೆ ಚೆಕ್‌ನ ನೀಡಿಕೆಯನ್ನು ಒಪ್ಪಿಕೊಂಡರೆ ಮತ್ತು "ಅಥವಾ ಧಾರಕ" ಪದಗಳನ್ನು ಹೊಡೆದುಹಾಕದಿದ್ದರೆ, ಚೆಕ್‌ನ ಸ್ವಾಮ್ಯ ಹೊಂದಿರುವ ವ್ಯಕ್ತಿಯು, ಚೆಕ್‌ನ ಭಾವಿ ಧಾರಕನಾಗುವನು ಹಾಗೂ ಅದನ್ನು ನಿರಾಕರಿಸಿದ ಸಂದರ್ಭದಲ್ಲಿ, ಎನ್.ಐ. ಅಧಿನಿಯಮದ 138ನೇ ಪ್ರಕರಣದ ಉಪಬಂಧವನ್ನು ಅನ್ವಯಿಸಲು ಹಕ್ಕುಳ್ಳವನಾಗುವನು ಎಂದು ನಿರ್ಣಯಿಸಿದೆ.

10. 2007 ಸಿಆರ್.ಎಲ್‌ಜೆ 2016

17. ***ಬಿ. ಸರ್ವೋತ್ತಮ –ವಿರುದ್ಧ– ಎಮ್. ಹನೀಫ್ (ಮೇಲಿನ)*** ಮೊಕದ್ದಮೆಯಲ್ಲಿ ಈ ನ್ಯಾಯಾಲಯವು ನೀಡಿದ ತೀರ್ಪುಗಳ ಪೈಕಿ ಒಂದು ತೀರ್ಪಿನಲ್ಲಿ, ಈ ನ್ಯಾಯಾಲಯವು ಕೆಳಗಿನಂತೆ ಅಭಿಪ್ರಾಯಪಟ್ಟಿದೆ:

> *"ಭಾರತದಲ್ಲಿ ಸಾಮಾನ್ಯ ಬ್ಯಾಂಕಿಂಗ್ ಆಚರಣೆಯನ್ನು ಸಂಪೂರ್ಣವಾಗಿ ತಲೆಕೆಳಗಾಗಿಸಿದ ಫೋರ್ಬ್ಸ್ ಕ್ಯಾಂಪ್‌ಬೆಲ್ –ವಿರುದ್ಧ– ಬಾಂಬೆಯ ಅಧಿಕೃತ ಹಸ್ತಾಂತರಗ್ರಾಹಿ (1925) 27 ಬಾಂಬೆ ಎಲ್‌ಆರ್ 34 ಈ ಮೊಕದ್ದಮೆಯಲ್ಲಿ ತೀರ್ಪನ್ನು ನೀಡುವವರೆಗೆ, ಒಮ್ಮೆ ವಿನಿಮಯಪತ್ರವನ್ನು ಧಾರಕನಿಗೆ ಸಂದಾಯನೀಯವೆಂದು ನೀಡಿದಲ್ಲಿ, ಅದು ಯಾವಾಗಲೂ ಧಾರಕವಾಗಿ ಉಳಿಯುತ್ತದೆ ಎಂದು ಸಮರ್ಥಿಸಲಾಗುತ್ತಿತ್ತು. ಸ್ವೀಕರ್ತನ ಅಥವಾ ಧಾರಕನ ಪರವಾಗಿ ಹುಂಡಿಯನ್ನು ಪಡೆದಲ್ಲಿ ಮತ್ತು ಮೂರನೇ ವ್ಯಕ್ತಿಗೆ ಸ್ವೀಕರ್ತನು ಹಿಂಬರಹ ಮಾಡಿದ್ದರೆ, ಅದು ಧಾರಕ ಹುಂಡಿ ಎಂದು ಕೊನೆಗೊಳ್ಳುತ್ತಿತ್ತು ಮತ್ತು ಮೂರನೇ ವ್ಯಕ್ತಿಗೆ ಅಥವಾ ಆತನ ಸೂಚನೆ ಮೇರೆಗೆ ಸಂದಾಯನೀಯವಾಗುತ್ತಿತ್ತು ಎಂದು ಅದರಲ್ಲಿ ತೀರ್ಪು ನೀಡಲಾಗಿತ್ತು. ವರ್ಗಾವಣೀಯ ಲಿಖಿತಗಳ (ತಿದ್ದುಪಡಿ) ಅಧಿನಿಯಮ, 1934ನ್ನು ಜಾರಿಗೆ ತಂದ ನಂತರ ಮಾತ್ರವೇ, "ಒಮ್ಮೆ ಧಾರಕನಾದರೆ, ಯಾವಾಗಲೂ ಧಾರಕ" ಎಂಬ ನಿಯಮವನ್ನು ಚೆಕ್‌ಗಳಿಗೆ ಸಂಬಂಧಪಡುವಷ್ಟರಮಟ್ಟಿಗೆ ಅಂತಿಮವಾಗಿ ಗುರುತಿಸಲಾಗುತ್ತಿದೆ ಮತ್ತು ಇಂಗ್ಲಿಷ್ ಮತ್ತು ಭಾರತದ ಕಾನೂನಿನ ನಡುವಿನ ವ್ಯತ್ಯಾಸವನ್ನು ಈ ಅಂಶದ ಆಧಾರದ ಮೇಲೆ ಪರಿಹರಿಸಲಾಯಿತು. ಎನ್.ಐ. ಅಧಿನಿಯಮದ 85ನೇ ಪ್ರಕರಣದ (2)ನೇ ಉಪ–ಪ್ರಕರಣವಾಗಿ ಪ್ರಸ್ತಾವಿಸಿದ ತಿದ್ದುಪಡಿಯನ್ನು ಹೀಗೆ ಓದಲಾಗುತ್ತದೆ."*

> *"ಚೆಕ್‌ಅನ್ನು ಧಾರಕನಿಗೆ ಸಂದಾಯನೀಯುವೆಂದು ಸಾಮಾನ್ಯವಾಗಿ ವ್ಯಕ್ತಪಡಿಸಿದಲ್ಲಿ, ಅದರ ಮೇಲೆ ಕಾಣುವ ಪೂರ್ಣ ಅಥವಾ ಖಾಲಿ ಹಿಂಬರಹ ಯಾವುದಾದರೂ ಏನೇ ಆಗಿರಲಿ ಮತ್ತು ಅಂಥ ಯಾವುದೇ ಹಿಂಬರಹವು ಮುಂದಿನ ವರ್ಗಾವಣೆಯನ್ನು ನಿರ್ಬಂಧಿಸಿರಲಿ ಅಥವಾ ಹೊರತುಪಡಿಸಿರಲಿ ಅದರ ಧಾರಕನಿಗೆ ಸೂಕ್ತ ಅವಧಿಯಲ್ಲಿ ಸಂದಾಯ ಮಾಡುವ ಮೂಲಕ ಧನಾದೇಶಿತನು ಸಾಲ ತೀರಿಸುತ್ತಾನೆ,"*

ಆದಾಗ್ಯೂ, ತಿದ್ದುಪಡಿಯು, ಹುಂಡಿಗಳಿಗೆ ಸಂಬಂಧಪಡುವಷ್ಟರ ಮಟ್ಟಿಗೆ, ಫೋರ್ಬ್ಸ್ (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ನಿರ್ಣಯಿಸಿದಂತೆ, ಕಾನೂನಿನ ಸ್ಥಿತಿಯನ್ನು ಬದಲಾಯಿಸುವುದಿಲ್ಲ.

18. ಕ್ರಾಸ್ ಮಾಡಿದ ಕಾರಣದಿಂದ ಚೆಕ್ "ಧಾರಕ ಚೆಕ್" ಆಗುವುದು ಕೊನೆಗೊಳ್ಳುತ್ತದೆಯೇ ಎಂಬ ಪ್ರಶ್ನೆಯು, ***ದುರ್ಗಾ ಷಾ ಮೋಹನ್ ಲಾಲ್ ಬ್ಯಾಂಕರ್ಸ್ –ವಿರುದ್ಧ– ಗವರ್ನರ್ ಜನರಲ್ ಇನ್ ಕೌನ್ಸಿಲ್*** [11], ಮೊಕದ್ದಮೆಯಲ್ಲಿ ಅಲಹಾಬಾದ್ ಉಚ್ಚ ನ್ಯಾಯಾಲಯದ ಮುಂದೆ ಪರಿಗಣನೆಗೆ ಬಂದಿದ್ದು, ಅದನ್ನು ಈ ಕೆಳಗಿನಂತೆ ನಿರ್ಣಯಿಸಲಾಗಿದೆ:

> *"ಕಾನೂನಿನ ಮೇರೆಗೆ ಚೆಕ್ ವರ್ಗಾವಣೀಯ ಲಿಖಿತವಾಗಿದೆ. ಅದರ ಮೇಲೆ "ವರ್ಗಾವಣೀಯುವಲ್ಲ" ಎಂದು ಗುರುತಿಸಿದರೆ ಮಾತ್ರ ಅದರ ವರ್ಗಾವಣೆಯನ್ನು ಇಲ್ಲವಾಗಿಸಬಹುದು; ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಅದನ್ನು ಕ್ರಾಸ್ ಮಾಡುವ ಮೂಲಕ ಮಾತ್ರವೇ ಅದರ ವರ್ಗಾವಣೆಯುನ್ನು*

11. ಎಐಆರ್ 1952 ಅಲಹಾಬಾದ್ 590

*ಇಲ್ಲವಾಗಿಸಲಾಗುವುದಿಲ್ಲ. ಚೆಕ್‌ಅನ್ನು ಕ್ರಾಸ್ ಮಾಡುವುದರ ಒಂದೇ ಪರಿಣಾಮವೆಂದರೆ, ವರ್ಗಾವಣೀಯ ಲಿಖಿತಗಳ ಅಧಿನಿಯಮದ 126ನೇ ಪ್ರಕರಣದಲ್ಲಿ ಹೇಳಿದಂತೆ, ಧನಾದೇಶ ಪಡೆದ ಬ್ಯಾಂಕ್, ಅನ್ಯಥಾ ಅದನ್ನು ಸಾಮಾನ್ಯವಾಗಿ ಕ್ರಾಸ್ ಮಾಡಿದ ಹೊರತು ಯಾರೇ ಬ್ಯಾಂಕರ್‌ನಿಗೆ ಅಥವಾ ಅದನ್ನು ವಿಶೇಷವಾಗಿ ಕ್ರಾಸ್ ಮಾಡಿದ ಹೊರತು ನಿರ್ದಿಷ್ಟ ಬ್ಯಾಂಕರ್‌ನಿಗೆ ಸಂದಾಯ ಮಾಡಬಾರದು. ಕ್ರಾಸ್ ಮಾಡುವುದರ ಸಂಬಂಧ ಬೇರೆ ಯಾವುದೇ ಪರಿಣಾಮವಿರುವುದಿಲ್ಲ. (ಕರ್ಲಾನ್ –ವಿರುದ್ಧ– ಐರ್ಲ್ಯಾಂಡ್, (1856) 25ಎಲ್.ಜೆ.ಕ್ಯು.ಬಿ. 113, ಕೋಲ್‌ರಿಡ್ಜ್ ಜೆ. ಪುಟ 114ರಲ್ಲಿ ಹೇಳಲಾಗಿದೆ):*

*"ಅದನ್ನು ತೆಗೆದುಕೊಳ್ಳುವ ವ್ಯಕ್ತಿಯು ಕಡೆಯಿಂದ ತೆಗೆದುಕೊಳ್ಳಬೇಕಾದ ಎಚ್ಚರಿಕೆಯನ್ನು ಅಗತ್ಯಪಡಿಸಲು ಮತ್ತು ಅದನ್ನು ಪ್ರಾಮಾಣಿಕವಾಗಿ ಆತನು ತೆಗೆದುಕೊಂಡಿದ್ದಾನೆ ಹಾಗೂ ಅದಕ್ಕೆ ಮೌಲ್ಯವನ್ನು ನೀಡಿದ್ದಾನೆ ಎಂದು ತೋರಿಸುವ ಬಾಧ್ಯತೆಯನ್ನು ಅವನ ಮೇಲೆ ಹೊರಿಸಲು ಕ್ರಾಸ್ ಮಾಡಲಾಗುತ್ತದೆ ಎಂದು ಹೇಳಬಹುದು; ಲಿಖಿತದ ವರ್ಗಾವಣೀಯತೆಯಲ್ಲಿ ಹಸ್ತಕ್ಷೇಪ ಮಾಡದೆ ಅದನ್ನು ಮುಂದಕ್ಕೆ ತೆಗೆದುಕೊಂಡು ಹೋಗಲಾಗುವುದಿಲ್ಲ."*

*ಸ್ಮಿತ್ –ವಿರುದ್ಧ– ದಿ ಯುನಿಯನ್ ಬ್ಯಾಂಕ್ ಆಫ್ ಲಂಡನ್, (1875) ಐ.ಕ್ಯು.ಬಿ.ಡಿ.31 ಪುಟ 34ರಲ್ಲಿ ಲಾರ್ಡ್ ಕೈರ್ನ್ಸ್ ಸಿ. ಅವರು – "ಕ್ರಾಸ್ ಮಾಡುವುದರ ಪರಿಣಾಮ ಏನೇ ಆಗಿರಲಿ, ಚೆಕ್‌ನ ವರ್ಗಾವಣೀಯತೆಯನ್ನು ಆ ಮೂಲಕ ನಿರ್ಬಂಧಿಸಲಾಗುವುದಿಲ್ಲ" ಎಂದು ಹೇಳಿದ್ದಾರೆ.*

ದಿನಾಂಕ: 31.05.1940ರಂದು, ರೆಜಿಮೆಂಟಿನ ಲೆಫ್ಟಿನೆಂಟ್ ಲಾಕಿಯರ್ ಅವರು ತಮ್ಮ ಹುದ್ದೆಯ ಸಾಮರ್ಥ್ಯದಲ್ಲಿ, ಮೇಜರ್ ಫಿಲಿಪ್ಸ್ ಅವರಿಗೆ ಅಥವಾ ಧಾರಕನಿಗೆ ಅವರ ಹುದ್ದೆಯ ಸಾಮರ್ಥ್ಯದಲ್ಲಿ ಸಂದಾಯನೀಯ ಚೆಕ್‌ಅನ್ನು ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ, ಅಲಹಾಬಾದ್ ಬ್ರಾಂಚ್‌ನಲ್ಲಿ 716–13–0 ರೂ.ಗಳಿಗೆ ಬರೆದರು ಅಥವಾ ಅದನ್ನು ಸಾಮಾನ್ಯವಾಗಿ ಕ್ರಾಸ್ ಮಾಡಿದರು. ಅವರು ಅದನ್ನು "ವರ್ಗಾವಣೀಯವಲ್ಲ"ವೆಂದು ಗುರುತು ಮಾಡಲಿಲ್ಲ. ಅವರು ಚೆಕ್‌ಅನ್ನು ಮೇಜರ್ ಫಿಲಿಪ್ಸ್ ಅವರಿಗೆ ಹಸ್ತಾಂತರಿಸಿದರು, ಅವರು ಅದನ್ನು ಖಾಲಿಯಾಗಿ ಹಿಂಬರಹ ಮಾಡಿ ಸಾರ್ಜೆಂಟ್ ಪೆಟ್ಟಿಫೋರ್ಡ್ ಅವರಿಗೆ ನೀಡಿದರು. ವಾದಿಯು ಅದನ್ನು ಬ್ಯಾಂಕರ್‌ನ ಮೂಲಕ ಸಂದಾಯ ಮಾಡಬೇಕಿತ್ತೇ ಹೊರತು ನೇರವಾಗಿ ಅಲ್ಲ ಮತ್ತು ಸಾರ್ಜೆಂಟ್ ಪೆಟ್ಟಿಫೋರ್ಡ್ ಅವರಿಗೆ ಚೆಕ್‌ಅನ್ನು ನಗದೀಕರಿಸಲು ನೀಡದೆ, ಲೆಫ್ಟಿನೆಂಟ್ ಮೌಸೆಲ್ ಮೂಲಕ ಖಜಾನೆಯಲ್ಲಿ ಸಂದಾಯ ಮಾಡಬೇಕೆಂದು ಹಸ್ತಾಂತರಿಸಲಾಗಿತ್ತು ಎಂದು ನ್ಯಾಯಾಲಯದ ಮುಂದೆ ವಾದಿಸಲಾಯಿತು. ಸದರಿ ಸಂದರ್ಭದ ಹಿನ್ನೆಲೆಯಲ್ಲಿ, ವಿಚಾರಣಾ ನ್ಯಾಯಾಲಯಗಳು ಚೆಕ್ ಧಾರಕನಿಗೆ ಸಂದಾಯನೀಯವಾಗಿದೆ ಮತ್ತು ಸಂದಾಯಗ್ರಾಹಿಯು ಈಗಾಗಲೇ ಖಾಲಿ ಹಿಂಬರಹ ಮಾಡಿರುವುದರಿಂದ, ಅದರ ಯಾರೇ ಧಾರಕನು ಬ್ಯಾಂಕರ್ ಮೂಲಕ ಅದರ ಹಣವನ್ನು ಸಂಗ್ರಹಿಸಬಹುದು ಎಂದು ತೀರ್ಪು ನೀಡಿದವು.

19. ಮೇಲಿನ ಪ್ರಸ್ತಾವವು, ಚೆಕ್‌ಅನ್ನು ಕ್ರಾಸ್ ಮಾಡುವ ಮೂಲಕ ಮಾತ್ರವೇ, "ಅಥವಾ ಧಾರಕನಿಗೆ" ಎಂಬ ಪದಗಳನ್ನು ಹೊಡೆದುಹಾಕಿದ ಹೊರತು ಅಥವಾ "ವರ್ಗಾವಣೀಯವಲ್ಲ"ವೆಂದು ಅದರ ಮೇಲೆ ಯಾವುದೇ ನಿರ್ದಿಷ್ಟ ಗುರುತನ್ನು ಮಾಡಿದ ಹೊರತು, ಧಾರಕ ಚೆಕ್‌ನ ಲಕ್ಷಣವನ್ನು ಸದರಿ ಚೆಕ್ ಕಳೆದುಕೊಳ್ಳುವುದಿಲ್ಲವೆಂಬ ಇತ್ಯರ್ಥವಾದ ನಿಯಮವನ್ನಾಧರಿಸಿದೆ. ಈ ಅಭಿಪ್ರಾಯವನ್ನು ಮೇಲೆ ಉಲ್ಲೇಖಿಸಿದ ***ಬಿ. ಸರ್ವೋತ್ತಮ*** ಮೊಕದ್ದಮೆಯಲ್ಲಿ ಈ ನ್ಯಾಯಾಲಯವು ಅನುಸರಿಸಿದೆ. ಕಾನೂನಿನ ಈ ನಿಲುವಿನ ಹಿನ್ನೆಲೆಯಲ್ಲಿ, ಚೆಕ್‌ಅನ್ನು ಕ್ರಾಸ್ ಮಾಡಿದ ಕಾರಣದಿಂದ, ಸದರಿ ಚೆಕ್, ಧಾರಕ ಚೆಕ್ ಆಗಿರುವುದು ಕೊನೆಗೊಳ್ಳುತ್ತದೆ ಮತ್ತು ಅದರ ಉತ್ಪತ್ತಿಯನ್ನು ಭಾವಿ ಧಾರಕನಿಗೆ ಸಂದಾಯ

ಮಾಡಲಾಗುವುದಿಲ್ಲ ಎಂಬ ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳ ವಾದವು ನಿರಾಕರಣೆಗೆ ಯೋಗ್ಯವಾಗಿದ್ದು, ತದನುಸಾರವಾಗಿ ಅದನ್ನು ತಳ್ಳಿಹಾಕಲಾಗಿದೆ.

20. ಅರ್ಜಿದಾರರು ತಮ್ಮ ಬ್ಯಾಂಕರ್ ಹತ್ತಿರ ನಿರ್ವಹಿಸುತ್ತಿದ್ದ ಖಾತೆಯ ಆಧಾರದ ಮೇಲೆ ಪ್ರಶ್ನೆಯಲ್ಲಿರುವ ಚೆಕ್‌ಅನ್ನು ಪಡೆದು, ಎನ್.ಐ. ಅಧಿನಿಯಮದ 138ನೇ ಪ್ರಕರಣದ ಅಭಿಪ್ರಾಯದಲ್ಲಿ "ಇತರ ಹೊಣೆಗಾರಿಕೆ"ಯ ತೀರಿಕೆಗಾಗಿ ಪ್ರತ್ಯರ್ಜಿದಾರ ಬ್ಯಾಂಕಿಗೆ ನೀಡಿದ್ದರು ಎಂಬುದನ್ನು ದೂರುದಾರರು ಮೊದಲ ನೋಟದಲ್ಲೇ ಸಾಬೀತುಪಡಿಸಿದ್ದಾರೆ, ಅರ್ಜಿದಾರರು ಮಾತ್ರವೇ ಸದರಿ ಚೆಕ್‌ನ ನಿರಾಕರಣೆಯ ಪರಿಣಾಮಗಳಿಗೆ ಹೊಣೆಗಾರರಾಗಿರುತ್ತಾರೆ.

21. ಮೇಲಿನ ಚರ್ಚೆಯ ಹಿನ್ನೆಲೆಯಲ್ಲಿ, ಅರ್ಜಿದಾರರಿಗೆ ಸಮನುಗಳನ್ನು ನೀಡುವಲ್ಲಿ ಮಾನ್ಯ ದಂಡಾಧಿಕಾರಿಗಳು ಪ್ರಶ್ನಿತ ಆದೇಶವನ್ನು ಹೊರಡಿಸುವಲ್ಲಿ ಯಾವುದೇ ತಪ್ಪು ಅಥವಾ ಕಾನೂನುಬಾಹಿರತೆಯು ನನಗೆ ಕಂಡುಬರುತ್ತಿಲ್ಲ. ತತ್ಪರಿಣಾಮವಾಗಿ, ಗುಣಾರ್ಹತೆಗಳು ಇಲ್ಲದಿರುವ ಅರ್ಜಿಯು ವಜಾಗೊಳ್ಳುವುದಕ್ಕೆ ಯೋಗ್ಯವಾಗಿದ್ದು, ತದನುಸಾರವಾಗಿ ವಜಾಗೊಳಿಸಲಾಗಿದೆ. ವಿಚಾರಣಾ ನ್ಯಾಯಾಲಯವು, ಕಾನೂನಿನಗನುಸಾರವಾಗಿ ವಿಚಾರಣೆಯನ್ನು ಮುಂದುವರಿಸತಕ್ಕದ್ದು.

ಅರ್ಜಿಯನ್ನು **ವಜಾಗೊಳಿಸಲಾಗಿದೆ**.

---